# ಸಾಕ್ಷಾತ್ಕಾರಕ್ಕೆ ಮಾರ್ಗ



❁ ಮುಖ್ಯಾಂಶವೇನೆಂದರೆ, ಮನುಷ್ಯ ಯಾವ ಮಾರ್ಗ ಬೇಕಾದರೂ ಅನುಸರಿಸಲಿ, ಮನಸ್ಸು ಸ್ಥಿರವಾಗದ ಹೊರತು ಯೋಗ ಸಾಧ್ಯವಾಗುವುದಿಲ್ಲ. ಯೋಗಿಯ ಮನಸ್ಸು ಆತನ ವಶದಲ್ಲಿರುತ್ತದೆಯೇ ವಿನಾ ಆತ ಅದರ ವಶದಲ್ಲಿರುವುದಿಲ್ಲ.

❁ ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಿದರೆ ಸ್ವಸ್ವರೂಪ ದರ್ಶನ ಪಡೆಯಬಹುದು. ಆದರೆ ಈ ಪ್ರಾಪಂಚಿಕ ವಸ್ತುಗಳ ಮೇಲಿನ ಭೋಗಾಸಕ್ತಿ ಎಷ್ಟು ಪ್ರಮಾಣದಲ್ಲಿ ಸಾಧಕನಲ್ಲಿ ಇರುವುದೋ, ಅದಕ್ಕನುಗುಣವಾಗಿ ಆತನಿಗೆ ಸ್ವಸ್ವರೂಪದರ್ಶನ ತಡವಾಗುತ್ತದೆ.

❁ ವ್ಯಾಕುಲಚಿತ್ತದಿಂದ ಆತನಿಗೆ ಪ್ರಾರ್ಥನೆ ಮಾಡಬೇಕು. ಹೃತ್ಪೂರ್ವಕ ಪ್ರಾರ್ಥನೆಗೆ ಆತ ಕಿವಿಗೊಟ್ಟೇ ಕೊಡುತ್ತಾನೆ.

❁ ಸರಳತೆ ಇದ್ದರೆ, ಭಗವಂತನ ಸಾಕ್ಷಾತ್ಕಾರ ಬೇಗ ದೊರೆತುಬಿಡುತ್ತದೆ. ಎರಡು ಮಾರ್ಗಗಳಿವೆ; ಸನ್ಮಾರ್ಗ, ಅಸನ್ಮಾರ್ಗ. ಸನ್ಮಾರ್ಗದಲ್ಲಿ ಮುಂದುವರಿಯಬೇಕು.

❁ 'ನಾನು ಮುಕ್ತ' ಎಂಬ ಮನೋಭಾವ ಬಹಳ ಒಳ್ಳೆಯದು. ಸತತ, 'ನಾನು ಮುಕ್ತ, ನಾನು ಮುಕ್ತ' ಅಂತ ಹೇಳುತ್ತಲೇ ಇದ್ದರೆ, ಮನುಷ್ಯ ನಿಜವಾಗಿಯೂ ಮುಕ್ತನಾಗಿ ಬಿಡುತ್ತಾನೆ. ಇದಕ್ಕೆ ಬದಲು ಮನುಷ್ಯ, 'ನಾನು ಬದ್ಧ, ನಾನು ಬದ್ಧ' ಅಂತ ಹೇಳಿಕೊಳ್ಳುತ್ತಲೇ ಇದ್ದರೆ, ಆತ ಬದ್ಧನೇ ಆಗಿಬಿಡುತ್ತಾನೆ. ಯಾರು ಕೇವಲ ಹೇಳುತ್ತಾನೋ, 'ನಾನು ಪಾಪಿ, ನಾನು ಪಾಪಿ' ಎಂಬುದಾಗಿ, ಆ ನೀಚ ಅಧೋಗತಿಗೆ ಇಳಿದುಬಿಡುತ್ತಾನೆ. ಅದಕ್ಕೆ ಬದಲು ಹೇಳಬೇಕು, 'ನಾನು ಭಗವನ್ನಾಮೋಚ್ಚಾರಣೆ ಮಾಡಿದ್ದೇನೆ. ಇನ್ನು ನನಗೆಲ್ಲಿಯ ಪಾಪ? ಇನ್ನು ಬಂಧನ ನನಗೆಲ್ಲಿಯದು?'

❁ ವಿವೇಕ ಇಲ್ಲದೆ ಇತ್ತು ಎಂದರೆ, ಕೇವಲ ಪಾಂಡಿತ್ಯ ಯಾವುದಕ್ಕೂ ಬಂದುದಲ್ಲ. ನಿರ್ಜನಪ್ರದೇಶದಲ್ಲಿ ಗೋಪ್ಯವಾಗಿ ಅಳುತ್ತ ಅಳುತ್ತ ಭಗವಂತನನ್ನು ಕರೆ, ಆತ ಏನೇನು ಬೇಕೋ ಎಲ್ಲವನ್ನೂ ಮಾಡಿಕೊಟ್ಟುಬಿಡುತ್ತಾನೆ.

❁ ಭಗವನ್ನಾಮದಲ್ಲಿ ಶ್ರದ್ಧೆಯಿಡು. ಬಳಿಕ ನೀನು ತೀರ್ಥಾದಿಗಳಿಗೆ ಹೋಗಬೇಕಾದ ಯಾವ ಆವಶ್ಯಕತೆಯೂ ಇರದು.

❁ ನಿಜವಾದ ಶ್ರದ್ಧೆಯಿಂದಲೇ ಆತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಡಬಹುದು. ಭಗವಂತನ ಸಂಬಂಧವಾಗಿ ಹೇಳಿರುವುದರಲ್ಲೆಲ್ಲಾ ಪೂರ್ಣ ಶ್ರದ್ಧೆಯಿಡುವುದಾದರೆ, ಸಾಕ್ಷಾತ್ಕಾರ ಇನ್ನೂ ಬೇಗ ದೊರೆತುಬಿಡುತ್ತದೆ.

❁ ಆಧ್ಯಾತ್ಮಿಕ ಜೀವನದ ಮೊದಮೊದಲಲ್ಲಿ ತೀರ್ಥಯಾತ್ರೆ, ಕೊರಳಿಗೆ ರುದ್ರಾಕ್ಷಿ ಅಥವಾ ತುಳಸಿಮಾಲೆ, ಮಡಿ–ಇವನ್ನೆಲ್ಲಾ ಆಚರಿಸಬೇಕು. ವಸ್ತುಲಾಭವಾಯಿತೆಂದರೆ, ಭಗವದ್ದರ್ಶನ ದೊರೆಯಿತು ಎಂದರೆ ಬಾಹ್ಯಾಡಂಬರ ಕ್ರಮೇಣ ಕಡಮೆಯಾಗಿಬಿಡುತ್ತದೆ. ಬಳಿಕ ಉಳಿದುಕೊಳ್ಳುವ ಕೆಲಸ ಆತನ ನಾಮ ಜಪ ಮಾಡುವುದು ಮತ್ತು ಸ್ಮರಣ ಮನನ.

❁ ಮನುಷ್ಯ ಭಗವಂತನನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಲಿ, ಹೃತ್ಪೂರ್ವಕವಾಗಿ ಭಗವಂತನನ್ನು ಕರೆದುದೇ ಆದರೆ ಆತ ಭಗವಂತನ ಸಾಕ್ಷಾತ್ಕಾರವನ್ನು ಪಡೆದೇ ಪಡೆಯುತ್ತಾನೆ. ವ್ಯಾಕುಲತೆ ಇತ್ತು ಎಂದರೆ ಜಯ.

❁ ಎಲ್ಲಿಯವರೆಗೆ 'ಭಗವಂತ ಕರ್ತ' ಎಂಬ ಜ್ಞಾನೋದಯವಾಗುವುದಿಲ್ಲವೊ, ಅಲ್ಲಿಯವರೆಗೆ ಮತ್ತೆ ಮತ್ತೆ ಈ ಜಗತ್ತಿಗೆ ಬರಲೇಬೇಕಾಗುತ್ತದೆ. ಮತ್ತೆ ಮತ್ತೆ ಜನ್ಮವೆತ್ತಬೇಕಾಗುತ್ತದೆ. 'ಭಗವಂತ ಕರ್ತ' ಎಂಬ ಜ್ಞಾನೋದಯವಾಗಿ ಬಿಟ್ಟರೆ ಮತ್ತೆ ಜನ್ಮವೆತ್ತಬೇಕಾಗಿರುವುದಿಲ್ಲ. ಎಲ್ಲಿಯವರೆಗೆ, 'ಹೇ ಭಗವಂತ, ನಿಜವಾಗಿ ಇರತಕ್ಕವನು ನೀನೊಬ್ಬನೇ' ಎಂದು ಹೇಳುವುದಿಲ್ಲವೊ, ಅಲ್ಲಿಯವರೆಗೆ ಈ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ. ಪುನರ್ಜನ್ಮ, ಈ ಜಗತ್ತಿಗೆ ಬಂದುಹೋಗುವುದು, ಇದ್ದೇ ಇರುತ್ತದೆ. ಮುಕ್ತಿ ದೊರಕುವುದಿಲ್ಲ. 'ನನ್ನದು, ನನ್ನದು' ಅಂದರೆ ತಾನೆ ಏನು ಪುರುಷಾರ್ಥ ದೊರೆಯುತ್ತದೆ? ಎಸ್ಟೇಟಿನ ವ್ಯವಸ್ಥಾಪಕ ಹೇಳಬಹುದು: 'ಇದು ನಮ್ಮ ತೋಟ. ಇದು ನಮ್ಮ ಮರಮಟ್ಟುಗಳು' ಎಂದು. ಆದರೆ ತೋಟದ ಯಜಮಾನ ಆತನನ್ನು ವಜಾಮಾಡಿಬಿಟ್ಟಾಗ, ತನ್ನ ಸ್ವಂತ ಉಪಯೋಗಕ್ಕೆ ದೊರೆತಿದ್ದ ಮಾವಿನ ಮರದ ಒಡಕಲು ಪೆಟ್ಟಿಗೆಯನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಧೈರ್ಯವಿರುವುದಿಲ್ಲ.

❁ ಫುಟ್‌ಪಾತಿನಲ್ಲಿರುವ ಮರಗಳನ್ನು ನೀನು ನೋಡಿಲ್ಲವೇನು? ಅವು ಸಸಿಯಾಗಿರುವವರೆಗೆ ಬೇಲಿ ಹಾಕಬೇಕು. ಇಲ್ಲದಿದ್ದರೆ ದನ, ಕರು, ಆಡು, ಅವನ್ನು ತಿಂದುಬಿಡುತ್ತವೆ. ಆದರೆ ಗಿಡದ ಕಾಂಡ ದಪ್ಪವಾಯಿತು ಎಂದರೆ, ಬಳಿಕ ಬೇಲಿ ಬೇಕಾಗಿರುವುದಿಲ್ಲ. ಅನಂತರ ಅದಕ್ಕೆ ಆನೆಯನ್ನು ತಂದು ಕಟ್ಟಿದರೂ ಅದಕ್ಕೇನೂ ಆಗುವುದಿಲ್ಲ. ಅದೇ ರೀತಿಯಾಗಿ ನೀನು ಮನಸ್ಸನ್ನು ಬಲವಾದುದನ್ನಾಗಿ ಮಾಡಿಕೊಂಡು ಬಿಟ್ಟಿದ್ದೇ ಆದರೆ ಇನ್ನು ಚಿಂತೆಯೇನು? ಭಯವೇನು? ವಿವೇಕವನ್ನು ಗಳಿಸಿಕೊಳ್ಳಲು ಮೊದಲು ಪ್ರಯತ್ನಪಡು.

ಶ್ರೀರಾಮಕೃಷ್ಣ ವಚನವೇದದಿಂದ